ಅ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ದಿನಾಂಕ ೩೧-೩-೮೭ ರಂದು ೬.೪೬ ಲಕ್ಷ ರೂ.

ಆ) ಹನ್ನೊಂದು ಕೊಳವೆ ಬಾವಿಗಳು ಕೊರೆದಿದ್ದು ಈ ಪೈಕಿ ಹತ್ತು ಕೊಳವೆ ಬಾವಿಗಳು ಯಶಸ್ವಿಯಾಗಿವೆ. ಅವುಗಳಿಗೆ ಕೈಪಂಪು ಜೋಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಕೊಳವಾಯಿ ನೀರು ಯೋಜನೆಗೆ ಜಲಮೂಲ ಇತ್ಯರ್ಥ ಮಾಡಲು ಪ್ರಯತ್ನ ನಡೆಯುತ್ತಿವೆ. ಕೆಲಸವನ್ನು ೮೯-೯೦ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮುಂರಕಿಲಾವಿ ಗ್ರಾಮದಲ್ಲಿ ಎನ್.ಆರ್.ಡಬ್ಲ್ಯು.ಎಸ್, ಕೆಲಸದ ಬಗ್ಗೆ

೨೨೨೬. **ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮುರಕಿಲಾವಿ ಗ್ರಾಮಕ್ಕೆ ಎನ್‌ಆರ್ ಡಬ್ಲ್ಯು ಎಸ್. ಕಾಮಗಾರಿಯು ಎಂದು ಮಂಜೂರಾಯಿತು, ಮತ್ತು ಅದಕ್ಕೆ ಮಂಜೂರಾದ ಹಣವೆಷ್ಟು ?

ಆ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು).—

ಅ) ದಿನಾಂಕ ೨೮-೩-೧೯೮೭ ೩.೬೪೫ ಲಕ್ಷ ರೂ. ಗಳು

ಆ) ೧೯೮೮-೮೯ರಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ. ಹನ್ನೊಂದು ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಈ ಪೈಕಿ ಎಂಟು ಯಶಸ್ವಿ ಆಗಿವೆ. ಮೂರು ಕೊಳವೆ ಬಾವಿಗಳಿಗೆ ಕೈಪಂಪು ಹಾಕಿ ಕೆಲಸ ನಿರ್ವಹಿಸುತ್ತಿವೆ, ಉಳಿದ ಐದು ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿರುತ್ತದೆ. ಕೊಳವಾಯಿಯಿಂದ ನೀರು ಪೂರೈಕೆ ಮಾಡುವ ಕೆಲಸ ಪ್ರಗತಿಯಲ್ಲಿದೆ.

ಬೈಲಹೊಂಗಲ ತಾಲ್ಲೂಕಿನಲ್ಲಿ ಎನ್.ಆರ್.ಡಬ್ಲ್ಯು.ಎಸ್. ಕೆಲಸದ ಬಗ್ಗೆ

೨೨೨೮. **ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ವನ್ನೂರ ಸುಣಕುಪ್ಪಿ ಮತ್ತು ವಂಸ್ತವಾಡಿ ಗ್ರಾಮಕ್ಕೆ ಎನ್.ಆರ್.ಡಬ್ಲ್ಯು.ಎಸ್. ಕೆಲಸವು ಎಂದು ಮಂಜೂರಾಯಿತು ? ಮತ್ತು ಇದಕ್ಕೆ ಎಷ್ಟು ಹಣವು ಮಂಜೂರಾಗಿದೆ ?

ಆ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು).—

ಅ) ೩೧-೩-೧೯೮೭ರಂದು ೪.೯೪ ಲಕ್ಷ ರೂ.

ಆ) ಜಲಮೂಲ ನಿಗದಿಪಡಿಸಲು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ಆದರೆ ಅವಶ್ಯ ಇಳುವಳಿ ದೊರೆಯದ ಕಾರಣ ಜಲಮೂಲ ಇತ್ಯರ್ಥ ಮಾಡಲು ಪ್ರಯತ್ನ ನಡೆಯುತ್ತಿದೆ. ಸದ್ಯದಲ್ಲಿ

ಈ ಗ್ರಾಮಗಳಿಗೆ ಕುಡಿಯುವ ನೀರಿನ ಸಲುವಾಗಿ ೧೯ ಬಾವಿಗಳನ್ನು ಕೊರೆದು ೧೩ ಯಶಸ್ವಿ ಆಗಿರುವ ಬಾವಿಗಳಿಗೆ ಕೈ ಪಂಪುಗಳನ್ನು ಹಾಕಿ ನೀರು ಸರಬರಾಜು ಆಗುತ್ತಿದೆ ಕೊಳಾಯಿ ನೀರು ಸರಬರಾಜು ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆಯನ್ನು ೧೯೮೮-೮೯ರೊಳಗೆ ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ.

ಹಿರೇಬೂದನೂರು ಗ್ರಾಮದಲ್ಲಿ ಎನ್.ಆರ್.ಡಬ್ಲ್ಯೂ.ಎಸ್. ಕೆಲಸದ ಬಗ್ಗೆ

೨೨೫೫. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂವ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿರೇಬೂದನೂರ ಗ್ರಾಮಕ್ಕೆ ಎನ್‌ಆರ್‌ಡಬ್ಲ್ಯೂಎಸ್ ಕೆಲಸವು ಎಂದು ಮಂಜೂರಾಯಿತು ಮತ್ತು ಮಂಜೂರಾಗಿರುವ ಹಣವೆಷ್ಟು ?

ಆ) ಈ ಕೆಲಸವು ಬಹಳ ಮಂದಗತಿಯಿಂದ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಕೊಳ್ಳಲಿರುವ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ದಿನಾಂಕ ೨೨-೦೨-೧೯೮೭ರಂದು (ಎಆರ್‌ಡಬ್ಲ್ಯೂಎಸ್) ರೂ. ೩.೨೬ ಲಕ್ಷ.

ಆ) ಬಂದಿದೆ.

ಇ) ಈವರೆಗೆ ೮ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಈ ಪೈಕಿ ೪ ಕೊಳವೆ ಬಾವಿಗಳು ಯಶಸ್ವಿಯಾಗಿದೆ. ಇವುಗಳಿಗೆ ಕೈಪಂಪು ಜೋಡಿಸಿ ನೀರು ಸರಬರಾಜು ಆಗುತ್ತಿದೆ. ಕೊಳಾಯಿ ನೀರು ಯೋಜನೆಗೆ ಬೇಕಾಗುವಷ್ಟು ನೀರು ದೊರೆಯುವಂತೆ ಜಲಮೂಲವನ್ನು ನಿಗದಿಪಡಿಸುವಂತೆ ಕಾರ್ಯ ಮುಂದುವರೆದಿದೆ. ಯೋಜನೆಯನ್ನು ೧೯೮೯-೯೦ರಲ್ಲಿ ಪೂರ್ಣಗೊಳಿಸಲಾಗುವುದು.

ಶಿಕಾರಿಪುರ ತಾಲ್ಲೂಕಿನಲ್ಲಿ ಮಿನಿವಾಟರ್ ಸಪ್ಲೈ ಕೆಲಸ ಸ್ಥಗಿತವಾಗಿರುವ ಬಗ್ಗೆ

೧೮೬೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಬೇರೆ ಬೇರೆ ಯೋಜನೆಗಳ ಅಡಿಯಲ್ಲಿ ಕೊಳವೆಬಾವಿಗಳನ್ನು ತೆಗೆದು ಅವುಗಳಿಗೆ ಕೈಪಂಪು ಜೋಡಿಸದೇ ಇರುವ ಗ್ರಾಮಗಳ ಹೆಸರುಗಳೇನು ಕೈಪಂಪು ಜೋಡಿಸದೇ ಇರಲು ಕಾರಣವೇನು ?

ಆ) ಶಿಕಾರಿಪುರ ತಾಲ್ಲೂಕಿನಲ್ಲಿ 'ಮಿನಿ ವಾಟರ್ ಸಪ್ಲೈ' ಯೋಜನೆ ಅಡಿಯಲ್ಲಿ ೧೯೮೭-೮೮, ೧೯೮೮-೮೯ನೇ ಸಾಲಿನಲ್ಲಿ ಇದುವರೆವಿಗೂ ಮಂಜೂರಾಗಿದ್ದು ಕೆಲಸ ಪೂರ್ಣ ಆಗದೇ ಇರುವ ಗ್ರಾಮಗಳ ಹೆಸರು ಮತ್ತು ಅದಕ್ಕೆ ಕಾರಣವೇನು ?

ಇ) ಈ ಯೋಜನೆಯಡಿಯಲ್ಲಿ ಪ್ರಾರಂಭವಾಗಿ ಅಪೂರ್ಣವಾಗಿರುವ ಮಿನಿ ವಾಟರ್ ಸಪ್ಲೈಗಾಗಿ ಖರ್ಚುಮಾಡಿರುವ ಹಾಗೂ ಉಳಿದಿರುವ ಹಣದ ಮೊತ್ತವೆಷ್ಟು ?